ಪಿಡಬ್ಲ್ಯೂ1 ಸಿಸಿ.ನಂ.1334/2021

ದಿನಾಂಕಃ 29-03-2022 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

ಪಾಟೀಸವಾಲುಃ ಆರೋಪಿ ಪರ ಶ್ರೀ ಬಿ ಆರ್ ಎಸ್ ವಕೀಲರಿಂದ

ನಾನು ಆದಾಯ ತೆರಿಗೆ ಪಾವತಿದಾರ. ನಾನು ನನ್ನ ಅಸೆಟ್ಸ್ ನಲ್ಲಿ ಈ ಸಾಲವನ್ನು ತೋರಿಸಿಲ್ಲ ನಾನು ಖಾತೆ ಮೂಲಕ ಕೊಟ್ಟಿದ್ದೇನೆ ಎಂದು ನುಡಿಯುತ್ತಾರೆ. ದಿಃ22-10-2020 ಕ್ಕೆ ನನ್ನ ಮನೆಯಲ್ಲಿ ನಗದು 8 ಲಕ್ಷ ಇತ್ತು. ನನಗೆ ಅಂಗಡಿ ವ್ಯಾಪಾರ ಮತ್ತು ವ್ಯವಸಾಯದಿಂದ 8 ಲಕ್ಷ ಬಂದಿದೆ. ಮತ್ತು ನನ್ನ ತಂದೆ ಕೂಡ ವಿಭಾಗ ಆದ ಕಾರಣ ನನಗೆ 5 ಲಕ್ಷ ನಗದು ಕೊಟ್ಟಿದ್ದರು. 8 ಲಕ್ಷದಲ್ಲಿ 5 ಲಕ್ಷ ನನ್ನ ತಂದೆ ಕೊಟ್ಟಿರುವುದು ಸೇರಿದೆಯಾ ಎಂದರೆ ಸಾಕ್ಷಿಯು ತಂದೆ ಕೊಟ್ಟಿದ್ದು ಸೇರಿಸಿದರೆ 13 ಲಕ್ಷ ಆಗುತ್ತದೆ ಎಂದು ನುಡಿಯುತ್ತಾರೆ. 22 ನೇ ತಾರೀಖು ನಾನು ಯಾವುದೇ ಹಣವನ್ನು ಬ್ಯಾಂಕ್ ಗೆ ಕಟ್ಟಿಲ್ಲ. ನಾನು ನನ್ನ ಖಾತೆಯ ಪ್ರಕಾರ ಎಲ್ಲರಿಗೂ

ಖಾತೆ ಮೂಲಕ ಕೊಟ್ಟಿಲ್ಲ ಕೆಲವರಿಗೆ ಖಾತೆ ಮೂಲಕ ಕೊಟ್ಟಿದ್ದೇನೆ ಕೆಲವರಿಗೆ ನಾನೇ ಸ್ವತಃ ಹಣವನ್ನು ( self) ನಗದಾಗಿ ಪಡೆದು ಆ ನಂತರ ಕೊಟ್ಟಿದ್ದೇನೆ. ನಾನು ನನ್ನ ಖಾತೆಯಿಂದ self ಮೂಲಕ ಪಡೆದು 5 ಜನಕ್ಕೆ ಕೊಟ್ಟಿದ್ದೇನೆ.

ನಾನು ಆರೋಪಿಗೆ ಹಣ ಕೊಟ್ಟಿದ್ದ ಎರಡು ತಿಂಗಳ ಮುಂಚೆ ಮತ್ತು ನಂತರ ಯಾರಿಗಾದರೂ self ಮೂಲಕ ಪಡೆದು ಹಣ ಕೊಟ್ಟಿದ್ದೀರಾ ಎಂದರೆ ಸಾಕ್ಷಿಯು ಅಂಗಡಿಯವರಿಗೆ self ವಿತ್ ಡ್ರಾ ಮಾಡಿ ಕೊಟ್ಟಿರುತ್ತೇನೆ. ದಿಃ12-10-2020 self ಅನ್ನುವುದು ಬಿಟ್ಟು ಬೇರೆ ಯಾವುದೂ ಇಲ್ಲ ಖಾತೆ ಮೂಲಕ ವರ್ಗಾವಣೆ ಮಾಡಿದ್ದೇನೆ. ಸಾಮಾನ್ಯವಾಗಿ ಆದಾಯ ತೆರಿಗೆ ಪಾವತಿ ಮಾಡುವಾಗ ನನಗೆ ವ್ಯವಸಾಯದಿಂದ ವ್ಯವಹಾರದಿಂದ ಬಂದ ಆದಾಯದ ಬಗ್ಗೆ ತೋರಿಸಿ ನಂತರ ತೆರಿಗೆ ಹಣ ಪಾವತಿಗೆ ಕೇಳಬೇಕು ಎಂದರೆ ಸರಿ. ದಿಃ12-10-2020 ರಂದು 3 ಲಕ್ಷ ಹಣವನ್ನು ನನ್ನ ಖಾತೆಯಿಂದ ಡ್ರಾ ಮಾಡಿ ಪುನಃ 20-10-2020 ರಂದು 4 ಲಕ್ಷ ಹಣವನ್ನು ನಗದಾಗಿ ಪಾವತಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನಾನು ಯಾವುದೇ ಸಾಲ ಪಡೆದಿಲ್ಲ ನನ್ನ ಹೆಂಡತಿ ಹೆಸರಿನಲ್ಲಿ ಸಾಲ ಇತ್ತು ಅದನ್ನು ಮನೆ ಸಲುವಾಗಿ ಮಾಡಿದ್ದೆವು ಅದನ್ನು ತೀರುವಳಿ ಮಾಡಿರುತ್ತೇವೆ. ನನ್ನ ಹೆಂಡತಿ ಸಾಲ ಮಾಡಿ ತೀರಿಸಿದೆ ಎಂದು ತೋರಿಸಲು ದಾಖಲಾತಿ ಇದೆ ಕೊಡುತ್ತೇನೆ. ನಾನು ಈ ದಾಖಲಾತಿ ಕೊಡುವ ಕಾಲಕ್ಕೆ ಕರ್ನಾಟಕ ಬ್ಯಾಂಕ್ ನಲ್ಲಿ ಚಿನ್ನದ ಮೇಲೆ 3 ಲಕ್ಷ ಸಾಲ ಮಾಡಿದ್ದೆ. ನಾನು ಸಾಲ ತೆಗೆದುಕೊಂಡ ಬಗ್ಗೆ ಕಟ್ಟಿದ್ದ ಬಗ್ಗೆ ದಾಖಲಾತಿ ಕೊಟ್ಟಿದ್ದೇನೆ. ಆಭರಣದ ಸಾಲ ಮತ್ತು ಕೃಷಿ ಸಾಲದ ಮೇಲೆ ಸರ್ಕಾರವೇ ವಿನಾಯಿತಿ ನೀಡಿದೆ ಅದನ್ನು ಅದಾಯ ತೆರಿಗೆಗೆ ಸೇರಿಸುವುದಿಲ್ಲ. ನಾನು ಸಾಲ ತೆಗೆದುಕೊಂಡ ಬಗ್ಗೆ ನಿಪಿ-6 ರಲ್ಲಿ ಇಲ್ಲ. ಆ ಸಾಲ ತೆಗೆದುಕೊಂಡ ಬಗ್ಗೆ ದಿನಾಂಕ ನೆನಪಿಲ್ಲ. ಪ್ರತೀ ವರ್ಷ ನವೀಕರಣ ಮಾಡುತ್ತೇವೆ.

ಅಕ್ಟೋಬರ್ 2020 ನೇ ಇಸ್ವಿಯಲ್ಲಿ ನಾನು ಎಷ್ಟು ಸಾಲ ಪಡೆದಿದ್ದೆ ಎಂಬ ಬಗ್ಗೆ ನಿಪಿ-6 ಬರುವುದಿಲ್ಲ ಮತ್ತು ಒಟ್ಟು ಮೊತ್ತ ಈಗ ನೆನಪಿಲ್ಲ. ತಿಂಗಳಿಗೆ 13 ಸಾವಿರ ಹಣವನ್ನು ಸಾಲದ ಮರುಪಾವತಿ ಮಾಡುತ್ತಿದ್ದೆ. ಆ 13 ಸಾವಿರ ಹಣದಲ್ಲಿ ಹೆಂಡತಿಯ ಸಾಲ ಹೋಗುತ್ತಿತ್ತು ನನ್ನದು ಯಾವುದೇ ಸಾಲ ಇಲ್ಲ. ನನ್ನ ಖಾತೆಯಿಂದಲೇ ಸಾಲದ ಹಣ ಮರು ಪಾವತಿ ಆಗುತ್ತದೆ ಎಂದರೆ ಸಾಕ್ಷಿಯು ನನ್ನ ಹೆಂಡತಿಯ ಸಾಲಕ್ಕೆ ನಾನು ಸಹ ಜಾಮೀನುದಾರನಾಗಿದ್ದೇನೆ ನನ್ನ ಖಾತೆಯಿಂದ ಹಣ ಮರುಪಾವತಿಯಾಗುವಂತೆ ವ್ಯವಸ್ಥೆ ಮಾಡಿದ್ದೇನೆ ಎಂದು ನುಡಿಯುತ್ತಾರೆ. 13,791/- ಮನೆ ಸಾಲಕ್ಕೆ ಮರು ಪಾವತಿಯಾಗುತ್ತದೆ. ಆರ್ಥಿಕವಾಗಿ ಚೈತನ್ಯ ಇಲ್ಲ ಎಂಬುವವರಿಗೆ ಸಾಲ ಕೊಡುತ್ತಾರೆ ಎಂದರೆ ಸಾಕ್ಷಿಯು ನಾನು ಆರ್ಥಿಕವಾಗಿ ಚೆನ್ನಾಗಿ ಇರುವುದಕ್ಕೆ ಸಾಲ ಕೊಡುವುದು ಎಂದು ನುಡಿಯುತ್ತಾರೆ.

ಸುಲ್ತಾನ್ ಖಾನ್ ಎಂಬುವವರಿಗೆ 8 ಲಕ್ಷ ಹಣ ಕೊಟ್ಟಿದ್ದೇನೆ. ಸುಲ್ತಾನ್ ಖಾನ್ ರವರಿಂದ ನಾನು ಜಮೀನು ತೆಗೆದುಕೊಂಡಿರುತ್ತೇನೆ. ನಾನು ಟಿ . ನಾರಾಯಣಸ್ವಾಮಿ ನಾನು ಮೊದಲು ಹಣ ಕೊಟ್ಟಿದ್ದೆ ಈ ಕಾರಣದಿಂದ ನನಗೆ ದಿಃ20-11-2020 ರಂದು ಹಣ ಕೊಟ್ಟಿರುತ್ತಾರೆ. ಸಾಕ್ಷಿ ಮುಂದುವರಿದು ನಾನು ಸಾಲ ಪಡೆದಿದ್ದೇನೆ ಎಂದು ನುಡಿಯುತ್ತಾರೆ. ನಾನು ಅಶ್ವಥ ಎಂಬುವವರ ಬಳಿ ಜಮೀನು ತೆಗೆದುಕೊಂಡಿರುತ್ತೇನೆ. ನಾನು ಟಿ. ನಾರಾಯಣಸ್ವಾಮಿ ಬಳಿ 14 ಲಕ್ಷ ಹಣ ಪಡೆದು ದಿಃ09-12-20 ರಂದು ಅಶ್ವಥನಿಗೆ 12 ಲಕ್ಷ ಕೊಟ್ಟು ಜಮೀನು ಕೊಂಡಿರುತ್ತೇನೆ. ನನ್ನ ಹತ್ತಿರ ಯಾವುದೇ ಹಣ ಇಲ್ಲದೆ ಇರುವುದರಿಂದ ಇತರೇ ವ್ಯಕ್ತಿಗಳಿಂದ ಸಾಲ ಪಡೆದಿದ್ದೇನೆ ಎಂದರೆ ಸರಿಯಲ್ಲ. ನಾನು ದಿಃ12-10-2020 ರಂದು ಬ್ಯಾಂಕ್ ನಿಂದ ಪಡೆದ ಹಣವನ್ನು ಆರೋಪಿಗೆ ಕೊಟ್ಟಿಲ್ಲ ಎಂದರೆ ಸರಿಯಲ್ಲ. ಆರೋಪಿಗೆ ಸಾಲ ಕೊಡಲು ನನ್ನ ಬಳಿ ಹಣ ಇರಲಿಲ್ಲ ಎಂದರೆ ಸರಿಯಲ್ಲ.

ಮುಂದುವರಿದ ಪಾಟೀಸವಾಲಿಗೆ ಸಮಯ ಕೋರಿದ್ದು ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇದೆ,

(ಶ್ರೀ. ಶಿವಕುಮಾರ ಜಿ.ಜೆ)
ಪ್ರಧಾನ ಸಿ.ನ್ಯಾ ಮತ್ತು ಜೆ.ಎಂ.ಎಫ್.ಸಿ.,
ಚಿಂತಾಮಣಿ